ಆದರೆ, ಅಧಿಕೃತ ಮೂಲಗಳು ಮಾತ್ರ ನೆರೂಡ ಸೆಪ್ಟೆಂಬರ್ 23, 1973ರಂದು ಕ್ಯಾನ್ಸರ್‌ನಿಂದ ನಿಧನರಾದರೆಂದು ಹೇಳುತ್ತವೆ. ಒಂದು ಕಾಲಕ್ಕೆ ತನ್ನ ಪ್ರೇಮಕಾವ್ಯದ ಮೂಲಕ ಹೆಸರಾಗಿದ್ದ ನೆರೂಡ, ತನ್ನ ಮರಣಾನಂತರದಲ್ಲಿ ಜಗತ್ತಿನ ಜನಾಲ್ಪಿಕೆ ಹಾಗೂ ಮಾನವ ಹಕ್ಕುಗಳ ಹೋರಾಟದಲ್ಲಿ ಪ್ರತಿರೋಧದ ದನಿಯಾಗಿ ಅಜರಾಮರರಾಗಿದ್ದಾರೆ. ಹಾಗಾಗಿಯೇ, ಅವರು ಹುಟ್ಟಿದ ದಿನವಾದ ಜುಲೈ 12ರಂದು ಲ್ಯಾಟಿನ್ ಅಮೆರಿಕದೊಂದಿಗೆ ಯಾವ ನಂಟನ್ನೂ ಹೊಂದಿರದ ಕನ್ನಡದಂತಹ ಭಾಷೆಯಲ್ಲೂ ಅವರ ಕಾವ್ಯವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಮೂಲಕ ಆಚರಿಸುವುದುಂಟು. ಹಾಗೆ ಆಚರಿಸುವವರು ಇತ್ತೀಚಿನ ವರ್ಷಗಳಲ್ಲಿ ನೆರೂಡರೊಂದಿಗೆ ಅಂಟಿಕೊಂಡಿರುವ ವಿವಾದಗಳೆಡೆ ಗಮನ ಹರಿಸಿರಲಾರರು.

ಈ ಪೀಠಿಕೆಯೊಂದಿಗೆ ನಾನು ಈ ಲೇಖನದಲ್ಲಿ ರಾಜಕೀಯ ಸೈದ್ಧಾಂತಿಕ ಬದ್ಧತೆ ಹಾಗೂ ಸಾಹಿತ್ಯಕ ಬದ್ಧತೆಯ ಕುರಿತು ಚರ್ಚಿಸಲು ಹೊರಟಿಲ್ಲ. ಬದಲಿಗೆ, ನಾನು ಮಾಡಹೊರಟಿರುವುದು ಅಚಲ ರಾಜಕೀಯ ಹಾಗೂ ಸಾಹಿತ್ಯಕ ಬದ್ಧತೆಯುಳ್ಳ ನೆರೂಡರಂತಹ ಲೇಖಕರು ಕೂಡ ವೈಯುಕ್ತಿಕ ನೆಲೆಯಲ್ಲಿ ನೈತಿಕ ಬದ್ಧತೆ ತೋರದೆ ಹೋದಾಗ ಹೇಗೆ ಅವರ ವಿಶ್ವಮಾನ್ಯವೆನಿಸುವಂತಹ ಸಾಹಿತ್ಯ ಕೂಡ ಪ್ರಶ್ನಾರ್ಹವೆನಿಸತೊಡಗುತ್ತದೆ ಎಂಬುದರ ಅನುಸಂಧಾನ. ಅದಕ್ಕಾಗಿ ನೆರೂಡ ಅವರ ಕಾವ್ಯವನ್ನು ಬಿಟ್ಟು ಅವರ ಗದ್ಯ ಕೃತಿಯೊಂದರ ವಿಶ್ಲೇಷಣೆ ಮಾಡುವ ಮೂಲಕ ಸಾಹಿತ್ಯ ಪ್ರಶಂಸೆ ಹಾಗೂ ಸೈದ್ಧಾಂತಿಕ ಒಲವು, ಕನ್ನಡ ಸಾಹಿತ್ಯ-ಸಂಸ್ಕೃತಿ ಸಂದರ್ಭದಲ್ಲಿ ಹೇಗೆ ವಿಮರ್ಶಾತೀತ ವ್ಯಕ್ತಿ ವೈಭವೀಕರಣಕ್ಕೆಡೆ ಮಾಡಿಕೊಟ್ಟಿದೆ ಎಂಬುದನ್ನು ಈ ಲೇಖನದಲ್ಲಿ ನಿರೂಪಿಸಲಿದ್ದೇನೆ. ಅದಕ್ಕಾಗಿ ಮುಖ್ಯವಾಗಿ ಕಾವ್ಯಾತ್ಮಕ ಗದ್ಯದಲ್ಲಿ ಅಶ್ಲೀಲವೆನಿಸುವಂತಹ ಸಂಗತಿಗಳನ್ನು ಶೀಲವಾಗಿಸುವ ಚಾಲಾಕಿತನವನ್ನು ಇಲ್ಲಿ ಗುರಿಯಾಗಿಸಿಕೊಂಡಿದ್ದೇನೆ. ಇದು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ವಿಮರ್ಶೆಯ ಶೀಲ, ಅಶ್ಲೀಲಗಳನ್ನು ಶೋಧಿಸುವ ನನ್ನ ಇತ್ತೀಚಿನ ಒಲವಿಗೆ ಪೂರಕವಾಗಿದೆ.

ವಿಶಾಲವಾದ ಅರ್ಥದಲ್ಲಿ ನನ್ನ ಈ ಪ್ರಯತ್ನವನ್ನು ನಾನು "ಸಾಹಿತ್ಯದ ರಾಜಕಾರಣ ಹಾಗೂ ಕಲಾಮೀಮಾಂಸೆ" ಎಂದು ಕರೆಯುತ್ತೇನೆ. ಈ ಉದ್ದೇಶಕ್ಕೆ 2018ರಲ್ಲಿ ಲಡಾಯಿ ಪ್ರಕಾಶನದ ಮೂಲಕ ಪ್ರಕಟವಾದ ಕನ್ನಡದ ಪ್ರಮುಖ ಅನುವಾದಕರೂ, ವಿಮರ್ಶಕರೂ ಆಗಿರುವ ಓ.ಎಲ್. ನಾಗಭೂಷಣ ಸ್ವಾಮಿಯವರ ಕನ್ನಡಾನುವಾದ 'ಪಾಬ್ಲೊ ನೆರೂಡ ನೆನಪುಗಳು' ಕೃತಿಯನ್ನು ವಿಶ್ಲೇಷಣೆಯ ಕೇಂದ್ರವಾಗಿರಿಸಿಕೊಂಡಿದ್ದೇನೆ. ಈ ಕನ್ನಡಾನುವಾದವನ್ನು ಯಾವ ಭಾಷೆಯಿಂದ ಮಾಡಲಾಗಿದೆ ಎಂಬುದರ ವಿವರವಿಲ್ಲದಿರುವುದರಿಂದ ಹಾರ್ಡಿ ಸೇಂಟ್ ಮಾರ್ಟಿನ್ ಇಂಗ್ಲಿಷ್‌ಗೆ ಅನುವಾದಿಸಿರುವ ನೆರೂಡರ ಸ್ಪ್ಯಾನಿಶ್ ಮೂಲದ ಕೃತಿಯನ್ನು ಓಎಲ್‌ಎನ್ ಮೂಲವಾಗಿರಿಸಿಕೊಂಡಿದ್ದಾರೆಂದು ಭಾವಿಸಿದ್ದೇನೆ.

* * *

ಚಿಲಿ ದೇಶಕ್ಕೆ ಎರಡನೇ ನೊಬೆಲ್ ಸಾಹಿತ್ಯ ಬಹುಮಾನದ ಕೀರ್ತಿ ತಂದುಕೊಟ್ಟವರು ನೆರೂಡ. ಮೊದಲನೆಯವರಾದ ಗೇಬ್ರಿಯೇಲ ಮಿಸ್ತ್ರಲ್, ನೊಬೆಲ್ ಬಹುಮಾನ ಪಡೆದ ಮೊದಲ ಚಿಲಿ ಲೇಖಕಿ ಹಾಗೂ ಲ್ಯಾಟಿನ್ ಅಮೆರಿಕನ್ ಮಹಿಳೆಯಾಗಿದ್ದರು. ಲ್ಯಾಟಿನ್ ಅಮೆರಿಕದ ಮತ್ತೊಬ್ಬ ಲೋಕಪ್ರಸಿದ್ಧ ಲೇಖಕ ಗೇಬ್ರಿಯಲ್ ಗಾರ್ಸಿಯ ಮಾರ್ಕೆಜ್ ಗುರುತಿಸಿರುವಂತೆ "ಇಪ್ಪತ್ತನೇ ಶತಮಾನದ ಅತ್ಯಂತ ಶ್ರೇಷ್ಠ ಕವಿ" ನೆರೂಡ. ಹಾಗಾಗಿಯೇ, ಕವಿಯಲ್ಲದೆ ರಾಯಭಾರಿಯೂ ಆಗಿದ್ದ ಅವರ 'ನೆನಪುಗಳು' ದೇಶ-ಕಾಲವನ್ನು ಮೀರಿದ ಸಾಂಸ್ಕೃತಿಕ ದಾಖಲೆಗಳು. ಓಎಲ್‌ಎನ್ ಅವರ 'ಪಾಬ್ಲೊ ನೆರೂಡ ನೆನಪುಗಳು' ಕೃತಿಯನ್ನು 'ದೇವರಾಗಲು ಒಲ್ಲದ ಕವಿಯ ನೆನಪುಗಳು' ಹೆಸರಿನಲ್ಲಿ ಸಿರಾಜ್ ಅಹಮದ್ ವಿಮರ್ಶೆ ಮಾಡಿದ್ದರು. ಡಿ.ಎಸ್. ನಾಗಭೂಷಣ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದ 'ಹೊಸ ಮನುಷ್ಯ' ಸಮಾಜವಾದಿ ಮಾಸಿಕ ದಿನಪತ್ರಿಕೆಯಲ್ಲಿ ಇದು ಪ್ರಕಟವಾಗಿತ್ತು.

ಸಿರಾಜ್ ಅವರು ತಮ್ಮ ಲೇಖನದ ಮೊದಲ ವಾಕ್ಯವನ್ನು "ನೆರೂಡನಂತಹ ಸಮೃದ್ಧ ಪಾಬ್ಲೊ ಕವಿಯ ಸಮೃದ್ಧ ಜೀವನ ಕಥಾನಕವನ್ನು ಓದುವುದು ಎಂದರೆ ಅದಿರನ್ನು ಕೈಯಲ್ಲಿ ಹಿಡಿದು ಅದು ನೆನಪುಗಳು ಹೇಗೆ ಅದ್ಭುತವಾದ –ಅನರ್ಘ್ಯವಾದ ಲೋಹವಾಯಿತು ಎಂದು ಊಹಿಸಿಕೊಂಡಂತೆ" ಎಂದು ಆರಂಭಿಸುತ್ತಾರೆ.